283 (656) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಾರ್ಷಿಕ ಅನುದಾನ ಕಡಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಇದಕ್ಕೆ ಕಾರಣವೇನು?

ಇ) ಇದರಿಂದ ಈ ಇಲಾಖೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಅಕಾಡೆಮಿ:ಪ್ರಾಧಿಕಾರಿಗಳಿಗೆ ಆರ್ಥಿಕ ಸಂಕಷ್ಟ ಪರಿಸ್ಥಿತಿ ಉಂಟಾಗುವುದಿಲ್ಲವೇ ಹಾಗೂ ವಿಶೇಷ ಅನುದಾನ ನೀಡುವ ಬಗ್ಗೆ ಸರ್ಕಾರದ ಕ್ರಮವೇನು?

ಈ) ಯಾವ ಯಾವ ಅಕಾಡೆಮಿ ಹಾಗೂ ವಿವಿಧ ಪ್ರಾಧಿಕಾರಗಳಿಗೆ ಎಷ್ಟೆಷ್ಟು ಶೇ. ಅನುದಾನ ಕಡಿತಗೊಳಿಸಲಾಗಿದೆ (ಅಕಾಡೆಮಿವಾರು ಪ್ರಾಧಿಕಾರಗಳವಾರು ವಿವರ ನೀಡುವುದು).

ಉ) ಪುಸ್ತಕ ಪ್ರಾಧಿಕಾರದ ಪುಸ್ತಕ ಸಗಟು ಖರೀದಿಗೆ ಪ್ರಸ್ತುತ ಹಣವಿಲ್ಲದಿರುವುದು ನಿಜವೇ.

ಊ) ಹಾಗಿದ್ದಲ್ಲಿ ಇದುವರೆಗೆ ಎಷ್ಟು ಮೊತ್ತದ ಪುಸ್ತಕ ಖರೀದಿಸಲಾಗುತ್ತಿತ್ತು ಹಾಗೂ ಈಗಿನ ಸ್ಥಿತಿ ಏನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಹೌದು

ಆ) ರಾಜ್ಯದ ಒಟ್ಟಾರೆ ಹಣಕಾಸು ಸಂಪನ್ಮೂಲದ ಹಿನ್ನೆಲೆಯಲ್ಲಿ 2004–05ನೇ ಸಾಲಿನಲ್ಲಿ ಯೋಜನೆಯಡಿಯಲ್ಲಿ ರೂ. 509.42 ಲಕ್ಷ ಹಾಗೂ ಯೋಜನೇತರದಡಿಯಲ್ಲಿ ರೂ. 152.24 ಲಕ್ಷ ಒದಗಿಸಲಾಗಿದೆ.

ಇ) ಅ) ಹೌದು

ಆ) ಹಂಚಿಕೆ ಮೊತ್ತದಲ್ಲಿ ನಿಗದಿತ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.

ಈ) ಯೋಜನೆ ಶೀರ್ಷಿಕೆಯಡಿ ಕಳೆದ ಸಾಲಿಗೆ ಹೋಲಿಸಿದಲ್ಲಿ ವಿವಿಧ ಅಕಾಡೆಮಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರಗಳಿಗೆ ಕಡಿಮೆ ಮಾಡಿದ ಶೇ. ವಾರು ಅನುದಾನ ವಿವರ.

ಕಡಿತಗೊಳಿಸಿದ ರೂ. ಲಕ್ಷಗಳಲ್ಲಿ

1.	ಕರ್ನಾಟಕ ಉರ್ದು ಅಕಾಡೆಮಿ	ಶೇ. 29.15 (5.35)
2.	ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ	ಶೇ. 37.36 (8.35)
3.	ಕರ್ನಾಟಕ ನಾಟಕ ಅಕಾಡೆಮಿ	ಶೇ. 37.36 (8.35)
4.	ಕರ್ನಾಟಕ ಸಾಹಿತ್ಯ ಅಕಾಡೆಮಿ	ಶೇ. 37.36 (8.35)
5.	ಕರ್ನಾಟಕ ಲಲಿತಕಲಾ ಅಕಾಡೆಮಿ	ಶೇ 37.36 (8.35)

6.	ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ	ಶೇ 37.36 (8.35)
7.	ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ	ಶೇ. 39.28 (5.5)
8.	ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ	ಶೇ. 39.28 (5.5)
9.	ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ	ಶೇ. 39.28 (5.5)
10.	ಕರ್ನಾಟ ಶಿಲ್ಪಕಲಾ ಅಕಾಡೆಮಿ	ಶೇ. 39.28 (5.5)
11.	ಕನ್ನಡ ಪುಸ್ತಕ ಪ್ರಾಧಿಕಾರ	ಶೇ 76.34 (38.17)

ಉ) ಹೌದು

ಊ) ಇದುವರೆಗೆ ಸಗಟು ಖರೀದಿ ಯೋಜನೆಯಡಿ ಖರೀದಿಸಿದ ಪುಸ್ತಕಗಳ ಮೊತ್ತ ವಿವರಗಳು ಕೆಳಗಿನಂತಿವೆ:

ವರ್ಷ	ವೆಚ್ಚ ಮಾಡಿದ ಅನುದಾನ ಲಕ್ಷಗಳಲ್ಲಿ
1997 ಪ್ರಕಟಣೆಗೆ	40.00
1998 "	25.43
1999ರ "	22.78
2000ರ "	28.58
2001ರ "	30.00
2002ರ "	19.05

ಸಗಟು ಖರೀದಿಗಾಗಿ ಈ ಸಾಲಿನಲ್ಲಿ ನಿರ್ದಿಷ್ಟವಾಗಿ ಹಂಚಿಕೆ ಮಾಡಿರುವುದಿಲ್ಲ.

.....

284 (657) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಪೂರ್ವ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು).

ಆ) ಇವುಗಳಲ್ಲಿ ಕೆಲಸ ನಿರ್ವಹಿಸುವ ಆಯಾಗಳು ದಿನಗೂಲಿ ನೌಕರರೇ ಅಥವಾ ಖಾಯಂ ನೌಕರರೇ (ಇವರ ಸಂಖ್ಯೆ ವಿವರ ನೀಡುವುದು).

ಇ) ಇಂತಹವರುಗಳ ಸೇವೆಯನ್ನು ಯಾವಾಗಿನಿಂದ ಪಡೆಯಲಾಗುತ್ತಿದೆ ಹಾಗೂ ಇವರಿಗೆ ನೀಡುತ್ತಿರುವ ವೇತನವೆಷ್ಟು;

ಈ) ಈ ಪೈಕಿ ಎಷ್ಟು ಜನ ಆಯಾಗಳನ್ನು ಖಾಯಂಗೊಳಿಸಲಾಗಿದೆ.